Spl.C. 3/2020.

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ,**
**ಇವರ ನ್ಯಾಯಾಲಯದಲ್ಲಿ.**

**ವಿಶೇಷ ಸತ್ರ ಮೊಕದ್ದಮೆ ಸಂಖ್ಯೆ: 3/2020.**

| | | | |
|---|---|---|---|
| ಹೆಸರು | : | ಅಕ್ಷಯ ಮಠಪತಿ | ಫ್ರಾಸಾ-20 |
| ತಂದೆಯ ಹೆಸರು | : | ಸದಯ್ಯ | ಚಾಸಾ-34 |
| ವಯಸ್ಸು | : | 24 ವರ್ಷ | |
| ಉದ್ಯೋಗ | : | ವಿದ್ಯಾರ್ಥಿ | |
| ವಾಸಸ್ಥಳ | : | ಶಿರೋಳ | |

ದಿನಾಂಕಃ 10-07-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ಆರೋಪಿತರು ಪರಿಚಯ. ಚಾಸಾ-1,24,25 ಪರಿಚಯವಿಲ್ಲ. ಘಟನೆ ಬಗ್ಗೆ ನನಗೆ ಮಾಹಿತಿ ಇಲ್ಲ. ನನಗೆ ಯಾರೂ ಮೊಬೈಲಗಳನ್ನು ಕೊಟ್ಟಿಲ್ಲ. ನಾನು ಅವುಗಳನ್ನು ಪಡೆದುಕೊಂಡಿಲ್ಲ. ಆ ಬಗ್ಗೆ ಪೋಲಿಸರ ಮುಂದೆ ನಾನು ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾ.ಅ.ರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟಿಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಪ್ರತಿಕೂಲ ಸಾಕ್ಷ್ಯ ನೀಡಿರುವುದು ಮನದಟ್ಟಾಗಿರುವುದರಿಂದ, ಕೋರಿರುವ ಅನುಮತಿಯನ್ನು ನೀಡಲಾಯಿತು)

**ಪಾಟಿಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ.**

ದಿನಾಂಕಃ 15-10-2019 ರಂದು ಮದ್ಯಾಹ್ನ 3.30-3.40 ರವರೆಗೆ ನಾನು ನಮ್ಮೂರ ಶಾಲೆ ಹತ್ತಿರ ನಿಂತಾಗ 1 ನೇ ಆರೋಪಿ ಒಂದು ಕ್ಯಾರಿಬ್ಯಾಗ ಕೊಟ್ಟಿದ್ದು ಅದರಲ್ಲಿ 4 ಮೊಬೈಲಗಳಿದ್ದವು ಎನ್ನುವುದು ಸರಿಯಲ್ಲ. ಅವುಗಳನ್ನು ಅವರ ಮನೆಗೆ ತೆಗೆದುಕೊಂಡುಹೋಗಿ ಕೊಡಲು ಹೇಳಿದನು, ನಾನು ಅವನಿಗೆ ಕೊಡಲು ಆಗುವುದಿಲ್ಲ ಅಂತಾ ಹೇಳಿ ಮರಳಿ ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ.

ದಿನಾಂಕಃ 30-11-2019 ರಂದು ಈಗ ಓದಿ ಹೇಳಿದ ನಿಪಿ-47 ರಂತೆ ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

(ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು)

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

10-07-2024.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ.

Spl.C. 3/2020.

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ, ಇವರ ನ್ಯಾಯಾಲಯದಲ್ಲಿ.**

**ವಿಶೇಷ ಸತ್ರ ಮೊಕದ್ದಮೆ ಸಂಖ್ಯೆ 3/2020.**

| | | | |
|---|---|---|---|
| ಹೆಸರು | : | ಪರಶುರಾಮ ಗಾಡಿನವರ | ಫ್ರಾಸಾ-19 |
| ತಂದೆಯ ಹೆಸರು | : | ಸದಾಶಿವ | ಚಾಸಾ-31 |
| ವಯಸ್ಸು | : | 25 ವರ್ಷ | |
| ಉದ್ಯೋಗ | : | ಕೂಲಿ | |
| ವಾಸಸ್ಥಳ | : | ಶಿರೋಳ | |

ದಿನಾಂಕಃ 10-07-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ಆರೋಪಿತರು ಪರಿಚಯ. ಆರೋಪಿತರು ಹಾಗೂ ನಾವು ಬೇರೆ ಬೇರೆ ಜಾತಿಯವರು. ಚಾಸಾ-1, 16, 17, 24 ರಿಂದ 26 ನನ್ನ ಸಂಬಂಧಿಕರು.

ಮಂಗಳವಾರ ನಾನು ಮನೆಯಲ್ಲಿದ್ದೆ ಘಟನೆ ಬಗ್ಗೆ ಸುದ್ದಿ ಬಂತು. ನಾನು ಬೈಕ ತೆಗೆದುಕೊಂಡು ಕೊಲೆಯಾದ ಸ್ಥಳಕ್ಕೆ ಹೋದೆ. ಅಲ್ಲಿ ಹೋಗಿ ವಿಠ್ಠಲನ ಮರ್ಡರ ಆಗಿತ್ತು. ಗಣಿಯವರ ಕಾಲುವೆಯಲ್ಲಿ ವಿಠ್ಠಲನ ಶವ ಬಿದ್ದಿತ್ತು. ಅವನ ಬಲಭಾಗದ ತಲೆಯನ್ನು ಕುತ್ತಿಗೆವರೆಗೆ ಕಡಿದಿದ್ದರು ಹಾಗೂ ಕತ್ತು ಕಡಿದಿದ್ದರು ಸ್ವಲ್ಪ ಚರ್ಮ ಉಳಿದಿತ್ತು, ಬಲಮುಂಗೈ ಹಾಗೂ ಎಡಗೈ ಎರಡು ಬೆರಳು ಕಡಿದಿದ್ದರು.

ನಂತರ ಮಲ್ಲಪ್ಪನನ್ನು ನೋಡಿದೆ ಅವನ ಎಡಭಾಗದ ಕತ್ತು ಕತ್ತರಿಸಿತ್ತು, ಸಾಕಷ್ಟು ರಕ್ತ ಬಿದ್ದಿತ್ತು. ಸ್ಥಳದಲ್ಲಿ ಒಂದು ಗಾಡಿ, ಡೂಮ್, ಚಪ್ಪಲಿ, ಮೊಬೈಲ, ಕರವಸ್ತ್ರ ಬಿದ್ದಿದ್ದವು. ಅಲ್ಲಿ ಕೂಡಿದ್ದ ಜನರು ಮರ್ಡರ್ ಆಗಿದೆ ಎಂದು ಹೇಳಿದರು. ಮುಮಾ-2,3,4,23 ಗಳನ್ನು ನೋಡಿ ಗುರುತಿಸಿದ್ದೇನೆ. ನಿಪಿ-5 ರಿಂದ 8 ಮೃತರ ಪೋಟೋಗಳನ್ನು ನೋಡಿ ಗುರುತಿಸಿದ್ದೇನೆ. ನಿಪಿ-20, 32, 40 ರಿಂದ 42 ಪೋಟೋಗಳನ್ನು ನೋಡಿ ಗುರುತಿಸಿದ್ದೇನೆ.

**<u>ಪಾಟಿಸವಾಲುಃ ಆರೋಪಿತರ ಪರ ಶ್ರೀ. ಎಸ್.ಸಿ.ಹೆಚ್ ವಕೀಲರಿಂದ.</u>**

ಮಲ್ಲಪ್ಪನನ್ನು ನೋಡಿದಾಗ ಅವನ ಎಡಭಾಗದ ಕತ್ತು ಕತ್ತರಿಸಿತ್ತು, ಸಾಕಷ್ಟು ರಕ್ತ ಬಿದ್ದಿತ್ತು ಎಂದು ಪೋಲಿಸರ ಮುಂದೆ ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎನ್ನುವುದು ಸರಿಯಲ್ಲ. ವಿಠ್ಠಲ ಮತ್ತು ಮಲ್ಲಪ್ಪನಿಗೆ ಅಪಘಾತವಾಗಿದೆ ಎಂದು ಮೊದಲು ಗೊತ್ತಾಗಿತ್ತು. ಏಕೆಂದರೆ ಜನರು ಮಾತನಾಡುತ್ತಿದ್ದರು. ಚಾಸಾ-1 ರ ಮಾತು ಕೇಳಿ ಕೊಲೆಯಾಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಅಲ್ಲಿ ಹೋಗಿ ನೋಡಲಾಗಿ ವಿಠ್ಠಲನ ಮರ್ಡರ ಆಗಿತ್ತು, ಗಣೆಯವರ ಕಾಲುವೆಯಲ್ಲಿ ವಿಠ್ಠಲನ ಶವ ಬಿದ್ದಿತ್ತು, ಅವನ ಬಲಭಾಗದ ತಲೆಯನ್ನು ಕುತ್ತಿಗೆವರೆಗೆ ಕಡಿದಿದ್ದರು ಹಾಗೂ ಕತ್ತು ಕಡಿದಿದ್ದರು ಸ್ವಲ್ಪ ಚರ್ಮ ಉಳಿದಿತ್ತು, ಬಲಮುಂಗೈ ಹಾಗೂ ಎಡಗೈ ಎರಡು ಬೆರಳು ಕಡಿದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

10-07-2024.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ.

Spl.C. 3/2020.

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ, ಇವರ ನ್ಯಾಯಾಲಯದಲ್ಲಿ.**

**ವಿಶೇಷ ಸತ್ರ ಮೊಕದ್ದಮೆ ಸಂಖ್ಯೆ 3/2020.**

| | | | |
|---|---|---|---|
| ಹೆಸರು | : | ಮಲ್ಲಿಕಾರ್ಜುನ ಪಾತ್ರೋಟ | ಫ್ರಾಸಾ-18 |
| ತಂದೆಯ ಹೆಸರು | : | ಪರಪ್ಪ | ಚಾಸಾ-30 |
| ವಯಸ್ಸು | : | 34 ವರ್ಷ | |
| ಉದ್ಯೋಗ | : | ಲೈನಮನ್ | |
| ವಾಸಸ್ಥಳ | : | ಮುಧೋಳ | |

ದಿನಾಂಕಃ 10-07-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ನ್ಯಾಯಾಲಯದ ಮುಂದಿರುವ ಆರೋಪಿತರು ನನಗೆ ಮೊದಲು ಗೊತ್ತಿಲ್ಲ. ಘಟನೆ ನಂತರ ಗೊತ್ತಾಯಿತು. ಚಾಸಾ-1 ಪರಿಚಯ. ಪೋಲಿಸರ ಹತ್ತಿರ ಹೇಳಿಕೆ ನೀಡಿದ್ದೇನೆ. ನಾನು ಟಿ.ಸಿ ರಿಪೇರಿ ಮಾಡಿ ಕೆ.ಇ.ಬಿ ಗೆ ಹೊರಟಾಗ ಆಶ್ರಯ ಪ್ಲಾಟ ದಾರಿಯಲ್ಲಿ ಜನರು ಸೇರಿದ್ದರು. ನಾನು ಹೋಗಿ ನೋಡಲಾಗಿ ಚಾಸಾ-29 ನನಗೆ ಪೋನ ಹಚ್ಚಿ ಕೊಡಲು ಹೇಳಿದರು. ನನ್ನ ಹತ್ತಿರ ಪೋನ ನಂಬರು ಇತ್ತು. ನಾನು ಚಾಸಾ-1 ಇವರಿಗೆ ಪೋನ ಮಾಡಿದೆ. ಅಲ್ಲಿ ಮಲೆಪ್ಪ ತಳಗೇರಿ ಮತ್ತು ವಿಠ್ಠಲ ರಸ್ತೆ ಮೇಲೆ ಬಿದ್ದಿದ್ದರು. ಬೈಕ ಕೂಡ ಅಲ್ಲೆ ಬಿದ್ದಿತ್ತು. ಅಲ್ಲಿ ಸೇರಿದ ಜನರು ಅಪಘಾತವಾಗಿದೆ ಎಂದು ಹೇಳಿದರು. ಆದ್ದರಿಂದ ನಾನು ಪೋನ್ ಮಾಡಿ ಹೇಳಿದೆ.

ನಿಪಿ-5 ಮತ್ತು 6 ವಿಠ್ಠಲನ ಪೋಟೋಗಳು ಹಾಗೂ ನಿಪಿ-7 ಮತ್ತು 8 ಮಲೆಪ್ಪನ ಪೋಟೋಗಳು ಇದ್ದು ಆದರೆ ನಾನು ಹತ್ತಿರ ಹೋಗಿ ನೋಡಿಲ್ಲ ದೂರದಿಂದ ಮಾತ್ರ ನೋಡಿದ್ದೇನೆ.

**ಪಾಟಿಸವಾಲುಃ ಆರೋಪಿತರ ಪರ ಶ್ರೀ. ಎಸ್.ಸಿ.ಹೆಬ್ ವಕೀಲರಿಂದ.**

ನಾನು ಜನ ಏಕೆ ನಿಂತಿದ್ದಾರೆ ಅಂತಾ ಹೋಗಿ ನೋಡಿದೆ, ಆಗ ಸೇರಿದ ಜನರು ಅಪಘಾತವಾಗಿದೆ ಎಂದು ಹೇಳಿದರು ಹಾಗೂ ನಾನು ಕೂಡ ಅಪಘಾತವಾಗಿದೆ ಎಂದು ಪೋನ ಮಾಡಿ ಚಾಸಾ-1 ರಿಗೆ ತಿಳಿಸಿದೆ.

**<u>ಮರುವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.</u>**

ಪೋಲಿಸರ ಮುಂದೆ ಕೊಲೆಯಾಗಿದೆ ಎಂದು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

10-07-2024.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ.